ಓ.ಎಸ್. ನಂ. 111/2016

ಪಿ.ಡಬ್ಲು.೧

ಇಂದು ದಿನಾಂಕ: 19.10.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಪ್ರತಿವಾದಿ ನಂ.೫ರ ಪರ ಶ್ರೀ ಕೆ.ಯು.ಐ. ವಕೀಲರಿಂದ</u>

ಮಹಾರಾಷ್ಟ್ರ ಗಡಿಯು 30 ಫೀಟು ಇರುವುದಿಲ್ಲ ಎಂಧರೆ ಸರಿ ಅಲ್ಲ. ನಾನು ನನ್ನ ವಾದ ಪತ್ರದ ಪ್ಯಾರಾ ನಂ.೩ ರಲ್ಲಿ ಮಹಾರಾಷ್ಟ್ರ ಗಡಿ 30 ಫೀಟು ಇದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿ ಅಲ್ಲ. ನನ್ನ ಜಮೀನು ಮತ್ತು ಪ್ರತಿವಾದಿ ನಂ.೫ ರವರ ಜಮೀನು ಒಂದೊಕ್ಕೊಂದು ಹೊಂದಿಕೊಂಡು ಇರುತ್ತವೆ ಅವುಗಳ ನಡುವೆ ಯಾವುದೇ ಜಾಗ ಇರುವುದಿಲ್ಲ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಮಹಾರಾಷ್ಟ್ರ ರಾಜ್ಯ ಮತ್ತು ಕರ್ನಾಟಕ ರಾಜ್ಯದ ಸೀಮೆ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.೧ ಮತ್ತು ೨ ರವರ ಜಮೀನಿನ ಮಳೆ ನೀರು ಮಹಾರಾಷ್ಟ್ರದ ಸೀಮೆಯ ಮೇಲೆ ಬೀಳುತ್ತದೆ ಎಂದು ಖೊಟ್ಟಿಯಾಗಿ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ ಅಲ್ಲ. ಸ.ನಂ. 94/1 ರಲ್ಲಿರುವ ಮಳೆ ನೀರು ನಮ್ಮ ಜಮೀನಾದ ಸ.ನಂ. 94/2 ಕ್ಕೆ ಹೋಗುತ್ತದೆ ಎಂದರೆ ಸರಿ ಅಲ್ಲ. ನನ್ನ ಜಮೀನು ಸನಂ. 94/2 ರ ಮಳೆ ನೀರು ಪೂರ್ವ ದಿಕ್ಕಿಗೆ ಇರುವ ಗುಂಜೋಟಿ ರಸ್ತೆಗೆ ಹೋಗುತ್ತದೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಉತ್ತರ ದಿಕ್ಕಿಗೆ ಹೋಗುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ವಾದ ಪತ್ರದಲ್ಲಿ ಕರ್ನಾಟಕದ ಗಡಿ ಎಷ್ಟು ಅಗಲ ಇದೆ ಎಂದು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಜಮೀನು ಸ.ನಂ. 94 ರಲ್ಲಿ ಬೀಳುವ ಮಳೆ ನೀರು ಪೂರ್ವ ದಿಕ್ಕಿಗೆ ಹರಿದು ಹೋಗುತ್ತದೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಉತ್ತರಕ್ಕೆ ಹರಿದು ಹೋಗುತ್ತದೆ ಎಂದು ನುಡಿಯುತ್ತಾರೆ. ನನ್ನ ಮತ್ತು ಪ್ರತಿವಾದಿ ನಂ.೧ ಮತ್ತು ೨ ರವರ ನಡುವೆ ಒಪ್ಪಂದವಾದ ನಂತರ ನಾವು ಸರ್ಕಾರದಿಂದ ಜಮೀನನ್ನು ಅಳತೆ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿ ಅಲ್ಲ. ನನ್ನ ಮತ್ತು ಪ್ರತಿವಾದಿ ನಂ.೧ ಮತ್ತು ೨ ರವರ ನಡುವೆ ಆದ ಒಪ್ಪಂದವು ಕಾನೂನುಬದ್ದವಾಗಿರುವುದಿಲ್ಲ ಎಂದರೆ ಸರಿ ಅಲ್ಲ. ನನ್ನ ಮತ್ತು ಪ್ರತಿವಾದಿ ನಂ.೫ ರವರ ಜಮೀನಿನ ನಡುವೆ ಮಹಾರಾಷ್ಟ್ರದ ಹಳೆ ಬಾರ್ಡರ ಇರುತ್ತದೆ ಎಂಧರೆ ಸರಿ. ಸಾಕ್ಷಿಗೆ ಭಾವಚಿತ್ರವನ್ನು ತೋರಿಸಿ ಭಾವಚಿತ್ರದಲ್ಲಿ ಕಾಣುವ ಜಮೀನಿನ ಬಂದಾರಿಯ ಉತ್ತರಕ್ಕೆ ಇರುವ ಜಮೀನು ಪ್ರತಿವಾದಿ ನಂ.೫ ರವರ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಅವರದೇ ಇರುತ್ತದೆ ಎಂದು ಒಪ್ಪಿಕೊಳ್ಳುತ್ತಾರೆ. ಸಾಕ್ಷಿ ಒಪ್ಪಿದ ಮೇರೆಗೆ ಭಾವಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಡಿ-1 ನ್ನು ತೋರಿಸಿ ಸದರಿ ಬಂದಾರಿಯ ದಕ್ಷಿಣ ಕಡೆಗೆ ನನ್ನ ಜಮೀನು ಬರುತ್ತದೆ ಎಂಧರೆ ಸರಿ. ಸದರಿ ಭಾವಚಿತ್ರದ ದಕ್ಷಿಣ ಕಡೆಗೆ ಬರುವ ಜಮೀನು ನನ್ನ ಜಮೀನು ಎಂದರೆ ಸರಿ. ನಿಡಿ-೧ರಲ್ಲಿ ಕಾಣುವ ಬಂದಾರಿ ಪೂರ್ವ-ಪಶ್ಚಿಮವಾಗಿರುತ್ತದೆ ಎಂದರೆ ಸರಿ. ಸದರಿ ನಿಡಿ-೧ರಲ್ಲಿ ಕಾಣುವ ಬಂದಾರಿಯು ಮಹಾರಾಷ್ಟ್ರ ಕರ್ನಾಟಕದ ಬಾರ್ಡರ ಇರುತ್ತದೆ ಎಂದರೆ ಸರಿ. ಸದರಿ ನಿಡಿ-೧ರಲ್ಲಿ ಕಾಣುವ ಬಂದಾರಿಯ ದಕ್ಷಿಣಕ್ಕೆ ಕರ್ನಾಟಕ ರಾಜ್ಯ ಆರಂಭ ಆಗುತ್ತದೆ, ಉತ್ತರಕ್ಕೆ ಮಹಾರಾಷ್ಟ್ರ ರಾಜ್ಯ ಆರಂಭ ಆಗುತ್ತದೆ ಎಂಧರೆ ಸರಿ.

ಸದರಿ ನನ್ನ ಮತ್ತು ಪ್ರತಿವಾದಿ ನಂ.೫ ರವರ ನಡುವೆ ಇರುವ ಜಮೀನಿನ ಬಂದಾರಿ ಮೇಲೆ ಒಂದು ಜಾಲಿ ಗಿಡ, ಮತ್ತು ಒಂದು ಬನ್ನಿ ಗಿಡ ಇರುತ್ತದೆ ಎಂದರೆ ಸರಿ. ಸದರಿ ಭಾವಚಿತ್ರದಲ್ಲಿ

ಬಂಡಿದಾರಿ ಮತ್ತು ನಾಲಾ ಕಾಣುವುದಿಲ್ಲ ಎಂದರೆ ಸಾಕ್ಷಿಯು ಹುಲ್ಲು ಬೆಳೆದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಜಮೀನು ಮತ್ತು ಪ್ರತಿವಾದಿ ನಂ.೫ ರವರ ಜಮೀನಿನ ನಡುವೆ ಗುಂಜೋಟಿಗೆ ಹೋಗುವ ರಸ್ತೆ ಬರುತ್ತದೆ ಎಂದರೆ ಸರಿ. ಪ್ರತಿವಾದಿ ನಂ.೫ ರವರು ಹೆಚ್ಚಿಗೆ ಹಣ ಕೊಟ್ಟು ಸದರಿ ಜಮೀನನ್ನು ಖರೀದಿ ಮಾಡಿದ ಕಾರಣ ನಾನು ಅವರ ಮೇಲೆ ಅಸೂಯೆ ಪಟ್ಟು ಈ ಖೊಟ್ಟಿ ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿ ಅಲ್ಲ. ಓ.ಎಸ್. ನಂ.16/2005 ರ ದಾವೆಯಲ್ಲಿ ಖೊಟ್ಟಿಯಾಗಿ ಮಾಹಿತಿ ನೀಡಿ ಮತ್ತು ಪ್ರತಿವಾದಿ ನಂ.೧ ಮತ್ತು ೨ ರವರ ಮೇಲೆ ಒತ್ತಡ ಹೇರಿ ಖೊಟ್ಟಿಯಾಗಿ ಕಾಗದ ಪತ್ರಗಳನ್ನು ಸೃಷ್ಟಿಸಿಕೊಂಡು ರಾಜಿ ಡಿಕ್ರಿ ಮಾಡಿಸಿಕೊಂಡಿರುತ್ತೇವೆ ಎಂಥರೆ ಸರಿ ಅಲ್ಲ.  ಪ್ರತಿವಾದಿ ನಂ.೧ ರವರ ವಿರುದ್ದ ಪ್ರತಿವಾದಿ ನಂ.೫ ರವರು ಉಮರ್ಗಾ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದರು, ಅದು ಡಿಕ್ರಿ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಜಮೀನು ಸ.ನಂ.94/1 ರ ಮೊದಲಿನ ಮಾಲೀಕರು ಹಾಗೂ ಈ ದಾವೆಯ ಪ್ರತಿವಾದಿ ನಂ.೩ ಮತ್ತು ೪ ರವರು ನನ್ನ ಜಮೀನು ಸ.ನಂ. 94/4 ರ ಮೂಲಕ ಮತ್ತು ಸ.ನಂ 95 ರ ಮೂಲಕ ಬದುವಿನ ಪಕ್ಕದಲ್ಲಿ ಹಾಗೂ ಬಾವಿಯ ಬಾಜುವಿನಿಂದ ತಮ್ಮ ಹೊಲಕ್ಕೆ ಹೋಗುವುದು ಬರುವುದು ಮಾಡುತ್ತಿದ್ದರು ಎಂದರೆ ಸರಿ ಅಲ್ಲ. ಈಗಲೂ ಸಹ ಕೂಡ ಅದೇ ದಾರಿಯ ಮೂಲಕ ಹೋಗುವುದು ಬರುವುದು ಮಾಡುತ್ತಿದ್ದಾರೆ ಎಂದರೆ ಸರಿ ಅಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.